ದುರುಗುಟ್ಟಿ ನೋಡಿದರು. ಏನೂ ಹೇಳದೆ,'ನಾಳೆ ಮುಂದುವರೆಸೋಣ, ಈಗ ಊಟಕ್ಕೆ ಹೋಗಿ' ಎಂದರು.

ಶಾಲೆಯ ಕಾಂಪೌಂಡಿನ ಪಕ್ಕದಲ್ಲಿಯೇ ಬೇವಿನ ಮರವೊಂದಿತ್ತು. ಅದರ ವಿಶಾಲವಾದ ಕಟ್ಟೆಯ ಮೇಲೆ ಕುಳಿತು ಮಧ್ಯಾಹ್ನದ ಊಟ ಮಾಡುತ್ತಿದ್ದೆವು. ಅದು ಹೆಸರಿಗೆ ಬೇವಿನ ಮರವೇ ಆದರೂ ಅದರೊಳಗೆ ಅರಳೀಮರವೂ ಬೆರೆತುಕೊಂಡು ಬೆಳೆದಿತ್ತು. ಆ ಕಟ್ಟೆ ನಮಗಷ್ಟೇ ಅಲ್ಲದೆ ಊರಿನ ಜನರ ಸಮಸ್ಯೆಗಳ ನ್ಯಾಯ ಪಂಚಾಯತಿಗಳೆಲ್ಲಾ ಅಲ್ಲೇ ಪರಿಹಾರ ಆಗೋದರಿಂದ ನ್ಯಾಯದ ಕಟ್ಟೆಯೂ ಆಗಿತ್ತು. ಮತ್ತೆ, ಪ್ರತಿ ಉಗಾದಿಯ ಮೊದಲ ದಿನ ನಮ್ಮ ಶಿವಯ್ಯ ಸ್ವಾಮಿಗಳು ಹೊಸ ವರ್ಷದ ಪಂಚಾಂಗ ಓದಿ ಮಳೆ-ಬೆಳೆ, ಒಳ್ಳೇದು-ಕೆಟ್ಟದು ಹೇಳೋದೆಲ್ಲಾ ನಡೀತಿತ್ತು. ಹಾಗಾಗಿ ಮರದ ಆ ಕಟ್ಟೆಯನ್ನು ಜನರು ದೈವದ ಕಟ್ಟೆ ಅನ್ನುತ್ತಿದ್ದರು.

ಮಧ್ಯಾಹ್ನದಲ್ಲಿ ಇಡೀ ಕಟ್ಟೆ ಬಗೆಬಗೆಯ ಊಟ ತಿಂಡಿಗಳ ಘಮಘಮದಿಂದ ತುಂಬಿರುತ್ತಿತ್ತು. ಹಾಗಾಗಿ ಬಡ್ಡೆಯಲ್ಲಿ ಗೊದ್ದಗಳು, ಟೊಂಗೆಗಳಲ್ಲಿ ಮಂಗಗಳು,

